| |
|---|
| Deposition Sheets (RP.No.57) Form No.4 |

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 1062/2014**

ಪಿಡ್ಯೂಃ 5 ಸಿಡ್ಲ್ಯೂಃ 7

ಸಾಕ್ಷಿದಾರನ ಹೆಸರು : ಪ್ರಶಾಂತ್ ಪಂಡಿತ್

ತಂದೆಯ ಹೆಸರು : ದಿ. ರಾಮಚಂದ್ರ ಪಂಡಿತ್

ಪ್ರಾಯ : 49 ವರ್ಷ

ಉದ್ಯೋಗ : ಕೃಷಿ

ವಾಸ : ಕಾಂತಾವರ

ದಿನಾಂಕ 24-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಚಾಸಾ-1 ಪರಿಚಯ ಇದೆ. ಅವರು ನಮ್ಮ ನೆರೆಕರೆಯವರು. ಪೋಲಿಸರು ನನ್ನನ್ನು ಮಹಜರಿಗೆ ದಿಃ 20-09-2011 ರಂದು ಬಾರಾಡಿ ಕಂಬಳ, ಕಾಂತಾವರ ಗ್ರಾಮಕ್ಕೆ ಚಾಸಾ-1 ರವರ ಚಿನ್ನದ ಸರ ಕಳ್ಳತನವಾದ ಬಗ್ಗೆ ಕರೆದಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-8 ರವರು ಇದ್ದರು. ಪೋಲಿಸರು ಸ್ಥಳದಲ್ಲಿ ಮಹಜರು ಮಾಡಿದ್ದು, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದ್ರಿ ಮಹಜರನ್ನು ಬೆಳ್ಳಿಗ್ಗೆ 10.30 ಗಂಟೆಯಿಂದ 11.30 ವರೆಗೆ ಮಾಡಿರುತ್ತಾರೆ. ಈ ಗ ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಗೆ ತಕ್ಷೀರು ಸ್ಥಳ ಮಹಜರಾಗಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಲಾಯಿತು. ಈಗ ನಾನು ನೋಡಿದ ನಕ್ಷೆ ಸ್ಥಳದಲ್ಲಿ ಮಾಡಿರುತ್ತಾರೆ.

ಪಾಟೀ ಸವಾಲು : ಆರೋಪಿ ಪರ : ಶ್ರೀ ಎಮ್.ಐ.ಕೆ ವಕೀಲರಿಂದಃ

ನಾನು ಘಟನೆ ನಡೆದ ಸಮಯದಲ್ಲಿ ನಾನು ನನ್ನ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದೆ. ಘಟನೆ ನಡೆದ ಸ್ಥಳದಿಂದ ನನ್ನ ಅಂಗಡಿ 80-100 ಮೀಟರು ದೂರದಲ್ಲಿದೆ.

ಪೋಲಿಸರು ಘಟನಾ ಸ್ಥಳಕ್ಕೆ ಹಾಜರಾಗಲು ನನಗೆ ಯಾವುದೇ ನೋಟೀಸು ನೀಡಿರುವುದಿಲ್ಲ. ನಾನು ತಕ್ಷೀರು ಸ್ಥಳಕ್ಕೆ ಹೋದಾಗ ಪೋಲಿಸರು ಇದ್ದರು. ಎಷ್ಟು ಜನ ಪೋಲಿಸರು ಇದ್ದರು ಎಂದು ನೆನಪಿಲ್ಲ. ಸದ್ರಿ ಸ್ಥಳದಲ್ಲಿ ನಾನು ಮತ್ತು ಚಾಸಾ-8 ರವರು ಇದ್ದೆವು. ನಾನು ಸ್ಥಳಕ್ಕೆ ಹೋದಾಗ ಪೋಲಿಸರು ದಾಖಲೆಗಳನ್ನು ಆಗಲೇ ತಯಾರು ಮಾಡಿದ್ದರು ಎಂದರೆ ಸರಿಯಲ್ಲ.

ತಕ್ಷೀರು ನಡೆದಿದೆ ಎಂದು ಹೇಳುವ ಸ್ಥಳದ ಪಶ್ಚಿಮಕ್ಕೆ ಡಾಕ್ಟರ್ ಜೀವಂದಾರ್ ಬಲ್ಲಾಳ್ ರವರ ಜಾಗ, ಪೂರ್ವಕ್ಕೆ ನನ್ನ ತಂದೆಯವರ ಜಾಗ, ದಕ್ಷಿಣಕ್ಕೆ ನನ್ನ ಕಟ್ಟಡ ಮತ್ತು ಉತ್ತರಕ್ಕೆ ರಸ್ತೆ ಇದೆ. ಪೋಲಿಸರು ತಯಾರಿಸಿದ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ತಕ್ಷೀರು ಸ್ಥಳದಲ್ಲಿ ನಾನು ಸಮಾರು 10.30 ರಿಂದ 11.30 ಗಂಟೆಯವರೆಗೂ ಇದ್ದೆ. ನಾನು ತಕ್ಷೀರು ಸ್ಥಳಕ್ಕೆ ಹೊದದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿದ್ದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಠಾಣೆಯಲ್ಲೇ ತಯಾರಿಸಿರುತ್ತಾರೆ ಮತ್ತು ನಾನು ಠಾಣೆಯಲ್ಲೇ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಸಾಕ್ಷ್ಯ ಸತ್ಯಕ್ಕೆ ದೂರವಾದದ್ದು ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ